ಚಿಂತಾಮಣಿ ನಗರದ ಭಕ್ತ ನಗರಿಯ ಸಾರ್ವಜನಿಕರಿಗೆ ರಸ್ತೆ ಸಂಪರ್ಕ ಒದಗಿಸುವುದು.

13(16) - ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಚಿಂತಾಮಣಿ ನಗರದ ಭಕ್ತ ನಗರಿ ಸಾರ್ವಜನಿಕರು ಯಜ್ಞವಲ್ಕ್ಯ ದೇವಾಲಯದ ರಸ್ತೆಗೂ ಕಾಳಿಕಾಂಬ ದೇವಾಲಯದ ರಸ್ತೆಗೂ ಮಧ್ಯೆ 20 ಅಡಿಗಳ ರಸ್ತೆಯನ್ನು ನೀಡಲು ಚಿಂತಾಮಣಿ ನಗರಸಭೆಗೆ ದೂರು ಕೊಟ್ಟಿರುವುದು ನಿಜವೇ?

2. ಈ ರಸ್ತೆ ಇಲ್ಲದೆ ಸಾರ್ವಜನಿಕರು ಬಸ್ಸು ನಿಲ್ದಾಣಕ್ಕೆ , ಮಾರುಕಟ್ಟೆಗೆ, ಆಸ್ಪತ್ರೆಗೆ ಓಡಾಡಲು ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

3. ಬಂದಿದ್ದಲ್ಲಿ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು)

1. ಹೌದು.

2. ಹೌದು.

3. ಈ ಸ್ಥಳವು ಅಂಚೆ ಇಲಾಖೆಗೆ ಸಂಬಂಧಪಟ್ಟಿದ್ದು ಅಂಚೆ ಇಲಾಖೆಯವರು ಆ ಸ್ಥಳದಲ್ಲಿ ರಸ್ತೆಗೆ ಜಾಗ ಬಿಡಲು ಒಪ್ಪುತ್ತಿಲ್ಲ. ರಸ್ತೆಯ ನಿರ್ಮಾಣಕ್ಕಾಗಿ ಸದರಿ ಜಮೀನನ್ನು ಉಪಯೋಗಿಸಿಕೊಳ್ಳಲು ಬಿಟ್ಟುಕೊಡುವಂತೆ ಅಂಚೆ ಇಲಾಖೆಯನ್ನು ಕೋರಲು ಕ್ರಮ ಕೈಗೊಳ್ಳಲಾಗುವುದು.

ಚಿಂತಾಮಣಿ ತಾಲ್ಲೂಕು ನಂದಿಗಾನಹಳ್ಳಿಯಲ್ಲಿ 99.11.ಕೆ.ವಿ. ಉಪ ವಿಭಾಗ ಸ್ಥಾಪಿಸುವುದು

14(18) - ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ತಾಲ್ಲೂಕು ನಂದಿಗಾನಹಳ್ಳಿ ಮತ್ತು ಅಕ್ಕಪಕ್ಕ ಗ್ರಾಮಗಳಲ್ಲಿ ವಿದ್ಯುಚ್ಛಕ್ತಿ ವೋಲ್ಟೇಜ್ ಸಮರ್ಪಕವಾಗಿಲ್ಲದೆ ಇರುವುದರಿಂದ, 66:11 ಕೆ.ವಿ.ಉಪ ವಿಭಾಗ ಮಂಜೂರಾಗಿರುವುದು ನಿಜವೇ?

ಆ) ಈ ಮೇಲೆ ತಿಳಿಸಿದ ಉಪ ವಿಭಾಗಕ್ಕೆ ಈಗಾಗಲೇ ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮ ರವರಿಂದ ಉಪ ವಿಭಾಗ ಸ್ಥಾಪಿಸಲು ಸ್ಥಳವನ್ನು ಪಡೆದಿರುವುದು ನಿಜವೇ?

ಇ) ಈ ಉಪ ವಿಭಾಗ ಇದೇ ವರ್ಷದಲ್ಲಿ ಪ್ರಾರಂಭ ಮಾಡಿ ಮುಗಿಸಿ ಸಾರ್ವಜನಿಕರಿಗೆ ಉತ್ತಮವಾದ ವೋಲ್ಟೇಜ್ ನೀಡಲು ಏನು ಕ್ರಮ ತೆಗೆದುಕೊಳ್ಳಲಾಗುವುದು ವಿವರ ನೀಡುವುದು?